**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 721/2024**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ18.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಸುರೇಶ |
| ತಂದೆಃ ಗಂಡನ ಹೆಸರು | ಪದ್ಮಪ್ಪ |
| ಉದ್ಯೋಗ | ವ್ಯವಸಾಯ |
| ವಯಸ್ಸು | 55 |
| ವಾಸಸ್ಥಳ | ಗುಡಿಹಾಳ |

**ಪ್ರಾರಂಭ ಸಮಯಃ 12.15. ಪಿ ಎಂ.**

**ಮುಖ್ಯ ವಿಚಾರಣೆಃ ಎಪಿಪಿ ಯವರಿಂದ**

ಮೃತ ಚಂದ್ರವ್ವ ನನ್ನ ಹೆಂಡತಿ. ಆಪಾದಿತನ ನನ್ನ ಮಗ. ಚಾಸಾ6 ನನ್ನ ಮಗ. ಚಾಸಾ2 ರಿಂದ 5 ಮತ್ತು 7 ರಿಂದ 11 ನನಗೆ ಗೊತ್ತು.

ಸಾಕ್ಷಿಗೆ ದಿಃ03.11.2023 ರ ದೂರು ಮತ್ತು ದಿಃ 04.11.2023 ರ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ1 ರಿಂದ 3 ಎಂದು, ಅವುಗಳಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತುಗಳನ್ನು ನಿಪಿ1(ಎ), 2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ4 ಮತ್ತು 5 ಎಂದು ಗುರುತಿಸಲಾಯಿತು.

ಸಾಕ್ಷಿಗೆ ದಿಃ04.11.2023 ರ ವಾಹನ ತಡೆ ಪಂಚನಾಮೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ6 ಎಂದು, ಅದರಲ್ಲಿರುವ ಸಾಕ್ಷಿಯ ಹೆಬ್ಬೆಟ್ಟಿನ ಗುರುತನ್ನು ನಿಪಿ6(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಭಾವಚಿತ್ರಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ7 ಮತ್ತು 8 ಎಂದು ಗುರುತಿಸಲಾಯಿತು.

ಸುಮಾರು 1 ವರ್ಷದ ಹಿಂದೆ ಆದಂತಹ ರಸ್ತೆಯ ಅಪಘಾತದಲ್ಲಿ ನನ್ನ ಹೆಂಡತಿ ಮರಣ ಹೊಂದಿರುತ್ತಾಳೆ. ಅಪಘಾತವು ಕಲಘಟಗಿ-ಹುಲಕೊಪ್ಪ ರಸ್ತೆಯ ಮೇಲೆ ಆಗಿರುತ್ತದೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ. ಅಪಘಾತದ ಸ್ಥಳದಲ್ಲಿ ನೆರೆದಂತಹ ಜನರನ್ನು ನೋಡಿ ನಾನು ಘಟನಾ ಸ್ಥಳಕ್ಕೆ ಹೋದೆ. ಸ್ಥಳದಲ್ಲಿ ನನ್ನ ಹೆಂಡತಿ ಬಿದ್ದಿದ್ದಳು. ಆಕೆಯ ಮುಖ ಮತ್ತು ದೇಹದ ಇತರೆ ಭಾಗಗಳಿಗೆ ಗಾಯಗಳಾಗಿದ್ದವು. ನಂತರ ಖಾಸಗಿ ವಾಹನದಲ್ಲಿ ನಾನು ಮತ್ತು ನನ್ನ ಮಗ ಸೇರಿ ನನ್ನ ಹೆಂಡತಿಯನ್ನು ಹುಬ್ಬಳ್ಳಿಯ ಶಕುಂತಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ದಿಃ03.11.2023 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ನನ್ನ ಹೆಂಡತಿ ಮರಣ ಹೊಂದಿದ್ದರು. ನಂತರ ಅಪಘಾತಪಡಿಸಿದ ವಾಹನ ಯಾವುದು ಮತ್ತು ಅಪಘಾತ ಹೇಗೆ ಆಯಿತು ಎಂದು ಗೊತ್ತಿಲ್ಲ.

ನಂತರ ದಿಃ03.11.2023 ರಂದು ನಿಪಿ1 ರಂತೆ ದೂರು ದಾಖಲು ಮಾಡಿರುತ್ತೇನೆ. ನಿಪಿ1 ನ್ನು ಚಾಸಾ11 ರವರು ಬರೆದರು. ನಿಪಿ2, 3 ಮತ್ತು 6 ಕ್ಕೆ ಪೋಲೀಸ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಪೋಲಿಸರು ಯಾವುದೇ ಘಟನಾ ಸ್ಥಳಕ್ಕೆ ಬಂದಿಲ್ಲ. ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ಭಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ಮತ್ತು ಎಲ್ಲಿ ತೆಗೆದರು ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತು ಮಾಡಿಲ್ಲ. ನಿಪಿ7 ಮತ್ತು 8 ನ್ನು ಯಾವ ಕಾರಣಕ್ಕಾಗಿ ಮತ್ತು ಎಲ್ಲಿ ತೆಗೆದು ಎಂದು ಗೊತ್ತಿಲ್ಲ.

**ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಸ.ಸ.ಅ ರವರಿಗೆ ಪಾಟೀಸವಾಲು ಮಾಡಲು ಅವಕಾಶ ನೀಡಲಾಯಿತು.**

ದಿಃ01.11.2023 ರಂದು ಬಿ. ಗುಡಿಹಾಳ-ಗಳಗಿ ಹುಲಕೊಪ್ಪ ರಸ್ತೆಯ ಮೇಲೆ ನನ್ನ ಜಮೀನಿನ ಹತ್ತಿರ ಸಂಜೆ 4.00 ಗಂಟೆ ಸಮಯದಲ್ಲಿ ಅಪಘಾತವಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಮತ್ತು ಚಾಸಾ6 ರವರು ಹೊಲದಲ್ಲಿ ಇದ್ದೆವು ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಹೆಂಡತಿ ಮತ್ತು ಆಪಾದಿತನಿಗೆ ತರಕಾರಿ ತೆಗೆದುಕೊಂಡು ಹೋಗಲು ಬನ್ನಿ ಎಂದು ಹೇಳಿದೆ ಎಂದರೆ ಸರಿಯಲ್ಲ.

ಆಪಾದಿತನು ತನ್ನ ಹೆಸರಿನಲ್ಲಿರುವ ವಾಹನ ಸಂಖ್ಯೆ ಕೆ25-ಇವಿ-7241 ದಲ್ಲಿ ನನ್ನ ಹೆಂಡತಿಯನ್ನು ಕುರಿಸಿಕೊಂಡು ಅಜಾಗರೂತೆಯಿಂದ ಚಾಲನೆ ಮಾಡಿ ರಸ್ತೆಯ ಮೇಲೆ ಬೀಳುವಂತೆ ಮಾಡಿದರು ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಜನ ಸೇರಿದ್ದರು ಎಂದರೆ ಸರಿ. ಅದನ್ನು ನೋಡಿ ನಾನು ಸ್ಥಳಕ್ಕೆ ಹೋದೆ ಎಂದರೆ ಸರಿ. ಅಪಘಾತದ ವಿಚಾರವನ್ನು ಅಲ್ಲಿ ಇದ್ದಂತಹ ಆಪಾದಿತನನ್ನು ಕೇಳಿ ತಿಳಿದುಕೊಂಡೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ತಲೆಯ ಹಿಂಬದಿ ಭಾರಿ ಗಾಯವಾಗಿತ್ತು ಎಂದರೆ ಸರಿ. ಸದರಿ ಸಮಯದಲ್ಲಿ ಚಾಸಾ6 ರಿಂದ 9, ನಾನು ಮತ್ತು ಆಪಾದಿತ ಸೇರಿಕೊಂಡು ಖಾಸಗಿ ವಾಹನದದಲ್ಲಿ ನನ್ನ ಹೆಂಡತಿಯನ್ನು ಆಸ್ಪತ್ರಗೆ ಕರೆದುಕೊಂಡು ಹೋದೆವು ಎಂದರೆ ಸರಿ. ಆಪಾದಿತನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ದಿಃ 03.11.2023 ರಂದು ನನ್ನ ಹೆಂಡತಿ ಮರಣ ಹೊಂದಿದ್ದರು ಎಂದರೆ ಸರಿ. ನಂತರ ನಾನು ನಿಪಿ1 ರಂತೆ ಆಪಾದಿತನ ವಿರುದ್ಧ ದೂರು ದಾಖಲು ಮಾಡಿದೆ ಎಂದರೆ ಸರಿಯಲ್ಲ. ನಂತರ ಪೋಲೀಸರು ನಿಪಿ1 ರಲ್ಲಿರುವ ಅಂಶಗಳು ನನಗೆ ಗೊತ್ತಿಲ್ಲ. ನಂತರ ಪೋಲಿಸರು ದಿಃ 04.11.2023 ರಂದು ಚಾಸಾ 4 ಮತ್ತು 5 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ನಿಪಿ2 ರಂತೆ ಪಂಚನಾಮೆ ಜರುಗಿಸಿ ನಿಪಿ3 ರಂತೆ ನಕಾಶೆಯನ್ನು ತಯಾರು ಮಾಡಿ ನಿಪಿ4 ಮತ್ತು 5 ರಂತೆ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ. ನಂತರ ಅದೇ ದಿನ ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ಪೋಲಿಸ ಠಾಣೆಯ ಆವರಣದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ನಿಪಿ6 ರಂತೆ ವಾಹನ ತಡೆ ಪಂಚನಾಮೆ ಜರುಗಿಸಿ ನಿಪಿ7 ಮತ್ತು 8 ರಂತೆ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ. ನಿಪಿ1, 2, 3 ಮತ್ತು 6 ರಲ್ಲಿರುವ ಸಂಗತಿಗಳನ್ನು ನನಗೆ ಓದಿ ಹೇಳಿ ನನ್ನ ಹೆಬ್ಬಟ್ಟಿನ ಗುರುತನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಆಪಾದಿತನು ನನ್ನ ಮಗನಾಗಿರುವುದರಿಂದ ಅವನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆಪಾದಿತನ ಪರ ಶ್ರೀ. ಎಮ್ ಬಿ ಡಿ ವಕೀಲರು ಪಾಟೀಸವಾಲು ಇಲ್ಲ ಎಂದು ನುಡಿದರು.**

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**